ಶ್ರೀ ವಿ. ಎನ್. ಪಾಟೀಲ್.—ಪಂಡಿತ್ ಕಮಿಟಿ ವರದಿಯನ್ನು ಎಷ್ಟು ಸೊಸೈಟಿಗಳು ಕಾರ್ಯಗತ ಮಾಡಿವೆ, ಎಷ್ಟು ಮಾಡಿಲ್ಲ ? ರಿಜಿಸ್ಟರ್‌ಆಗಿರುವ ಸೊಸೈಟಿಗಳ ಮೇಲೆ ಸರ್ಕಾರದ ಹತೋಟಿ ಏನು ?

ಶ್ರೀ ವಿ. ಶಂಕರ ಆಳ್ವ.—ಎಷ್ಟು ಸೊಸೈಟಿಗಳು ಇಪ್ಲಿಮೆಂಟ್ ಮಾಡಿವೆ ಎನ್ನುವ ವಿವರಗಳು ಇಲ್ಲ. ಸಿಬ್ಬಂದಿಯನ್ನು ಅವರೇ ನೇಮಕ ಮಾಡಿಕೊಳ್ಳಬೇಕು. ಎಷ್ಟುಕೊಡಬೇಕು ಏನು ಎನ್ನುವುದನ್ನು ಕೂಡ ಅವರೇ ನಿರ್ಣಯ ಮಾಡಿಕೊಳ್ಳಬೇಕು.

ಶ್ರೀ ಎಂ. ಎಚ್. ಜಯಪ್ರಕಾಶನಾರಾಯಣ.—ಸರ್ಕಾರದವರು ಸೇಕಡ 51ರಷ್ಟು ಮತ್ತು ಹೆಚ್ಚಾಗಿ ಹಣವನ್ನು ಒದಗಿಸುತ್ತಿದ್ದಾರೆ. ಕೆಲವು ಸಂಸ್ಥೆಗಳಿಗೆ 90 ಭಾಗವನ್ನು ಕೂಡ ಕೊಡುತ್ತಿದ್ದಾರೆ. ನೇಮಕಾತಿಗಳನ್ನು ಮಾಡುವಾಗ ಸರ್ಕಾರದ ಆದೇಶವನ್ನು ಅನುಸರಿಸಿ ಮಾಡುತ್ತಿದ್ದಾರೆ. ಆದ್ದರಿಂದ ಸರ್ಕಾರದವರು ಕೊಡುವ ವೇತನಗಳಿಗೆ ಅನುಗುಣವಾಗಿ ಇರುವಂತೆ ಮಾಡುವುದು ಒಳ್ಳೆಯದಲ್ಲವೇ ?

ಶ್ರೀ ವಿ. ಶಂಕರ ಆಳ್ವ.—ಸೊಸೈಟಿ ಕಾನೂನು ಪ್ರಕಾರ ಹಾಗೆ ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಪಂಡಿತ್ ಕಮಿಟಿ ವರದಿಯನ್ನು ಕಾರ್ಯರೂಪಕ್ಕೆ ತರುವುದಕ್ಕೆ ಒತ್ತಾಯ ಮಾಡಲು ಸಾಧ್ಯವಾಗುವುದಿಲ್ಲ; ಅಡ್‌ಮೈಸ್ ಮಾಡಬಹುದು ಎಂದು ಹೇಳಿದರು. ಕಾರ್ಮಿಕರ ವೇತನ ಮಂಡಳಿಯನ್ನು ರಚನೆ ಮಾಡಿದಾಗ, ಇದೇ ರೀತಿಯ ಪ್ರಸಂಗ ಬಂದಾಗ, ವೇತನ ಮಂಡಳಿಯ ವರದಿಯು ಸಲಹಾ ರೂಪದಲ್ಲಿದ್ದರೂ ಇಟ ಹ್ಯಾಸ್ ಗಾಟ್ ದಿ ಫೋರ್ಸ್ ಆಫ್ ಲಾ. ಅದನ್ನು ಕಾರ್ಯಗತ ಮಾಡಲೇ ಬೇಕು ಎಂದು ಇರಬೇಕಾದರೆ ಸಹಕಾರ ಸಂಸ್ಥೆಗಳಿಗೆ ಸಂಬಂಧಪಟ್ಟಂತೆ ಏಕೆ ಕಾರ್ಯಗತ ಮಾಡುವುದಕ್ಕೆ ಆಗುವುದಿಲ್ಲ ?

ಶ್ರೀ ವಿ. ಶಂಕರ ಆಳ್ವ.—ಫೋರ್ಸ್ ಆಫ್ ಲಾ ಎಂದು ಹೇಳುವುದಕ್ಕೆ ಆಗುವುದಿಲ್ಲ. ಉದಾಹರಣೆಗೆ ಡಿ. ಸಿ. ಸಿ. ಬ್ಯಾಂಕ್ ತೆಗೆದುಕೊಂಡರೆ ಪ್ರತಿಯೊಂದು ಜಿಲ್ಲೆಯಲ್ಲಿಯೂ ಬ್ಯಾಂಕುಗಳಿವೆ. ಅವುಗಳ ಆರ್ಥಿಕ ಪರಿಸ್ಥಿತಿ ಹೆಚ್ಚು ಕಡಿಮೆ ಇರುತ್ತದೆ. ಕೆಲವು ಬ್ಯಾಂಕುಗಳು ಸ್ವಲ್ಪ ಲಾಭ ಮಾಡುತ್ತವೆ, ಕೆಲವು ಕಡೆ ನಷ್ಟವಾಗುತ್ತಿರುತ್ತದೆ. ಅವರೆಲ್ಲರಿಗೂ ಇಷ್ಟೇ ಸಂಬಳ ಕೊಡಿ ಎಂದು ಸರ್ಕಾರ ಒತ್ತಾಯ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಪರಿಸ್ಥಿತಿ ಹದಗೆಟ್ಟಿರುವ ಸೊಸೈಟಿಗಳಿಗೆ, ಬ್ಯಾಂಕುಗಳಿಗೆ ಇಷ್ಟೇ ಸಂಬಳ ಕೊಡಿ ಎಂದರೆ ಹಾಗೆ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ, ಅವು ದಿವಾಳಿಯಾಗುತ್ತವೆ. ಆದ್ದರಿಂದ ನಾವು ಒತ್ತಾಯ ಮಾಡುವುದಕ್ಕಾಗುವುದಿಲ್ಲ.

ಶ್ರೀ ಬಾಪೂ ಗೌಡ ರಾಯಪ್ಪ.—ಸಹಕಾರ ಸಂಘಗಳಲ್ಲಿ ಕೆಲಸ ಮಾಡತಕ್ಕ ನೌಕರರ ನೇಮಕವನ್ನು ಮತ್ತು ಅವರ ವೇತನವನ್ನು ರಿಜಿಸ್ಟ್ರಾರ್ ಅವರ ಅನುಮತಿಯನ್ನು ಪಡೆದುಕೊಂಡು ಮಾಡುತ್ತಿಲ್ಲವೇ ?

ಶ್ರೀ ವಿ. ಶಂಕರ ಆಳ್ವ.—ಬೈಲಾಗಳನ್ನು ಮಾಡಿ ರಿಜಿಸ್ಟ್ರಾರ್ ಅವರಿಗೆ ಕಳುಹಿಸುತ್ತಾರೆ, ಅವರು ಅದನ್ನು ಸ್ಯಾಂಕ್ಷನ್ ಮಾಡುತ್ತಾರೆ.

GRANT OF FOREST LAND FOR CULTIVATION AT KANAKAPURA TALUK.

260. Sri S. KARIAPPA (Kanakapura).—

Will the Minitesr for Agriculture and Forests be pleased to state :—

(*a*) the names of spots where forest lands have been granted for cultivation on non-alienation scheme in Kanakapura Taluk;

(*b*) the extent of the area in each case;

(*c*) the dates of grant of each of these lands;

(SRI S. KARIYAPPA)

(*d*) the number of grantees who are not agriculturists;

(*e*) the number of grantees who are not the residents of this taluk;

(*f*) the number of grantees who are either dead or have left the place;

(*g*) how the Government propose to dispose of the land of those who have either left the place or dead;

(*h*) whether there are representations to hand over such lands to the Revenue Department;

(*i*) whether there are cases of transfer of these lands by the grantees to others?

Sri K. H. PATIL (Minister for Agriculture and Forests).—

(*a*) (i) Bilikal state Forest (Yalavanath Block).

(ii) Ramadevarabetta State Forest (Billidale Block).

(*b*) and (*c*) 166 acres 28 guntas *vide* Government Order No. R. 5351-4-LR. 1.27-427, dated 20th January 1928.

(ii) 170 acres *vide* Government Order No. AFD 191 DST 57, dated 18th April 1958.

(*d*) All are agriculturists, except in case of the Maralwadi Mosque.

(*e*) There are no grantees who are not residents of Kanakapura Taluk.

(*f*) Sixty-four.

(*g*) The land of the original grantees who have died or have left is being now cultivated by others on their behalf.

(*h*) No.

(*i*) No.

ಶ್ರೀ ಎಸ್. ಕರಿಯಪ್ಪ.– ಅರಣ್ಯ ಜಮೀನನ್ನು ಕೊಟ್ಟಿರುವ ಸ್ಥಳಗಳು ಸುಮಾರು 15-20 ಇವೆ ಆದರೂ ಕೂಡ ಎರಡೇ ಸ್ಥಳಗಳ ಹೆಸರನ್ನು ತಿಳಿಸಿರುತ್ತಾರೆ. ಬಾಕಿಯಾದಕ್ಕೆ ಸಂಬಂಧಪಟ್ಟ ರಿಕಾರ್ಡ್‌ಗಳು ಸರ್ಕಾರದಲ್ಲಿ ಇಲ್ಲವೇ ?

†ಶ್ರೀ ಕೆ. ಎಚ್. ಪಾಟೀಲ್.—ಅವೆಲ್ಲ ಇದರಲ್ಲಿಯೇ ಬರುವುದರಿಂದ ಮುಖ್ಯವಾದ ಹೆಸರುಗಳನ್ನು ಮಾತ್ರ ಕೊಟ್ಟಿದೆ.

ಶ್ರೀ ಎಸ್. ಕರಿಯಪ್ಪ.—ಜಮೀನುಗಳನ್ನು ಕೊಡುವಾಗ ಅವುಗಳನ್ನು ಪರಭಾರೆ ಮಾಡ ಬಾರದೆಂಬ ನಿಯಮದ ಮೇಲೆ ಕೊಟ್ಟಿರುವುದರಿಂದ, ಅವುಗಳನ್ನು ಉತ್ತಮ ಸ್ಥಿತಿಗೆ ತರುವುದಕ್ಕೆ ಸಾಲ ಮಾಡುವ ಹಾಗೆ ಇಲ್ಲ. ಇಂಥ ಪರಿಸ್ಥಿತಿ ಒದಗಿರುವುದರಿಂದ ಅವುಗಳನ್ನು ರೆವಿನ್ಯೂ ಇಲಾಖೆಗೆ ವಹಿಸುವ ಆಲೋಚನೆ ಏಕೆ ಮಾಡಲಿಲ್ಲ ?

ಶ್ರೀ ಕೆ. ಎಚ್. ಪಾಟೀಲ್.—ಸಣ್ಣ ಜಮೀನ್ದಾರರ ಹೆಸರಿನಿಂದ ಕೊಟ್ಟ ಜಮೀನುಗಳನ್ನು ದೊಡ್ಡ ದೊಡ್ಡವರು ನುಂಗಿದಂಥ ಉದಾಹರಣೆಗಳು ಸರ್ಕಾರದ ಗಮನಕ್ಕೆ ಬಂದಿರುವುದರಿಂದ

ಅಂಥದನ್ನು ತಪ್ಪಿಸಿ ಸಣ್ಣ ರೈತರ ಕೈಯಲ್ಲಿಯೇ ಅವು ಉಳಿಯಬೇಕು ಎನ್ನುವ ದೃಷ್ಟಿಯಿಂದ ಸರ್ಕಾರ ಈ ಕರಾರು ಹಾಕಿದೆ. ಆದ್ದರಿಂದ ಈ ಕರಾರನ್ನು ಕಡ್ಡಾಯವಾಗಿ ಅಮಲಿನಲ್ಲಿ ತರುತ್ತೇವೆ.

ಶ್ರೀ ಎಂ. ಬಿ. ರಾಮಸ್ವಾಮಿ.—(ಋ) ಗೆ ಉತ್ತರವಾಗಿ ಬೇರೆಯವರು ಸಾಗುವಳಿ ಮಾಡುತ್ತಿದ್ದಾರೆಂದು ಹೇಳಿದ್ದಾರೆ, (ಎ) ಗೆ ಉತ್ತರವಾಗಿ ಯಾರೂ ಪರಭಾರೆ ಮಾಡಿಲ್ಲ ಎಂದು ಹೇಳಿದ್ದಾರೆ. ಜಮೀನನ್ನು ಬೇರೆಯವರು ಮಾಡುತ್ತಿದ್ದರೆ ಅದು ಪರಭಾರೆಯಲ್ಲವೇ ?

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸದಸ್ಯರ ಅಭಿಪ್ರಾಯದಲ್ಲಿ ಹಾಗೆ ಇರಬಹುದು. ಬೇರೆಯವರು ಮಾಡುವಾಗ, ಯಾರ ಹೆಸರಿಗೆ ಜಮೀನು ಕೊಡಲಾಗಿದೆಯೋ ಅವರ ಪರವಾಗಿ ಮಾಡುತ್ತಿದ್ದಾರೆಂದು ಹೇಳಿದ್ದೇವೆ.

ಶ್ರೀ ಸಿ. ಬೈರೇಗೌಡ.—ಕೆಲವು ಕಡೆ ಮಾತ್ರ ಅರಣ್ಯ ಇರಾಖೆಯು ಜಮೀನನ್ನು ಸಾಗುವಳಿ ಕೊಡುವಾಗ ಮತ್ತೆ ಕೆಲವು ಕಡೆ ಸಾಗುವಳಿಗೆ ಕೊಡದೆ ಇರುವುದಕ್ಕೆ ಕಾರಣವೇನು ?

ಶ್ರೀ ಕೆ. ಎಚ್. ಪಾಟೀಲ್.—ಅಂದಿನ ಸರ್ಕಾರ ಕೊಟ್ಟಿದೆ. ಇಂದಿನ ಸರ್ಕಾರ ನಿರ್ದಿಷ್ಟವಾದ ನಿಲುವು ತಾಳಿ ಅರಣ್ಯ ಭೂಮಿಯನ್ನು ಕೊಡಬಾರದೆಂದು ಮಾಡಿದೆ. ಅಂದಿನ ಸರ್ಕಾರ ಏಕೆ ಹಾಗೆ ಮಾಡಿತು ಎಂದು ನಾವು ಹೇಳುವುದಕ್ಕಾಗುವುದಿಲ್ಲ.

1-30 P.M.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ.—ಸ್ವಾಮಿ, ಕನಕಪುರ ತಾಲ್ಲೂಕಿನಲ್ಲಿ ಯಾವ ಯಾವ ಸಂದರ್ಭದಲ್ಲಿ ಎಷ್ಟು ಜನಕ್ಕೆ ಮಂಜೂರು ಮಾಡಿದೆ ಎನ್ನುವ ಪೂರ್ತಿ ಪಟ್ಟಿ ಕೊಟ್ಟಿಲ್ಲ ಮತ್ತು ಕಾಲ್ಪಟ್ಟಿ ಕಾಲುವೆಯಲ್ಲಿ 10-15 ವರ್ಷದಿಂದಲೂ ಸೆಂಟ್ರಲ್ ಸ್ಪಾನ್ಸರ್ಡ್ ಸ್ಕೀಂ ಪ್ರಕಾರ 300-350 ಎಕರೆ ಕೊಟ್ಟಿದ್ದಾರೆ. ಆದರೆ ಅವರಿಗೆ ಇನ್ನೂ ಹಕ್ಕು ಕೊಟ್ಟಿಲ್ಲ. ಇದರಿಂದ ಧಕ್ಕೆ ಆಗಿರುವುದರಿಂದ ಅವರಿಗೆ ಆ ಜಮೀನಿನ ಹಕ್ಕು ಕೊಡುವುದಕ್ಕೆ ಅವಕಾಶ ಮಾಡಿ ಕೊಡುತ್ತಿರಾ ?

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸದಸ್ಯರು ಯಾವ ಯಾವ ಸಂದರ್ಭದಲ್ಲಿ ಎಷ್ಟೆಷ್ಟು ಜನಕ್ಕೆ ಜಮೀನು ಕೊಟ್ಟಿರುವ ಪೂರ್ತಿ ಪಟ್ಟಿ ಕೊಟ್ಟಿಲ್ಲ ಎಂದು ಹೇಳುತ್ತಾರೆ. ಅವರು ಮಂಜೂರಾತಿ ಪಡೆದವರಲ್ಲಿ ಈ ತಾಲ್ಲೂಕಿನವರಲ್ಲದವರ ಸಂಖ್ಯೆ ಎಷ್ಟು ಎಂದು ಕೇಳಿರುವುದರಿಂದ ಎಷ್ಟು ಮಾತ್ರ 64 ಅನ್ನುವ ಸಂಖ್ಯೆ ಕೊಟ್ಟಿದೆ. ಈಗ ಸೆಂಟ್ರಲ್ ಸ್ಪಾನ್ಸರ್ಡ್ ಸ್ಕೀಂ ಪ್ರಕಾರ ಕಾಲ್ಪಟ್ಟಿ ಕಾಲುವೆಯಲ್ಲಿ ಆ ಜನರಿಗೆ ಹಕ್ಕು ಕೊಡುವ ವಿಚಾರ ಕೇಳುತ್ತಿದ್ದಾರೆ. ಈ ಬಗ್ಗೆ ಬೇರೆ ಪ್ರಶ್ನೆ ಕೇಳಿದರೆ ಹೇಳುತ್ತೇನೆ.

ಶ್ರೀ ಕೆ. ಎಂ. ದೊರೆಸ್ವಾಮಿ ನಾಯಿಡು.—ಸ್ವಾಮಿ ನಮ್ಮ ದೇಶದಲ್ಲಿ ಸುಮಾರು 23 ರಷ್ಟು ಕಾಡು ಪ್ರದೇಶ ಕಡಿಮೆಯಾಗಿದೆ. ಆದರೆಲ್ಲೂ ತತ್ಕಾಪಿ ಮೈಸೂರು ದೇಶದಲ್ಲಿ 18 ಪರ್ಸೆಂಟ್ ಅಷ್ಟು ಕಡಿಮೆಯಾಗಿದೆ. ಕಾರಣ ಕಾಡು ಕಡಿಯುತ್ತಾ ಬಂದಿರುವುದರಿಂದ ಕಡಿಮೆಯಾಗುತ್ತಾ ಬಂದಿದೆ ಆದುದರಿಂದ ಇನ್ನು ಮೇಲೆ ಯಾರಿಗಾದರೂ ಆಗಲಿ ಫಾರೆಸ್ಟ್ ರ್ಯಾಂಡ್‌ನ್ನು ಕೊಡುವುದಿಲ್ಲ ಎನ್ನುವ ಒಂದು ನಿರ್ದಿಷ್ಟವಾದ ನಿಲುವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸದಸ್ಯರು 18 ಪರ್ಸೆಂಟ್ ಅಷ್ಟು ಕಡಿಮೆಯಾಗಿದೆ ಎಂದು ಹೇಳಿದರು, ಅದು 18 ಪರ್ಸೆಂಟ್ ಅಲ್ಲ 14 ಪರ್ಸೆಂಟ್ ಅಷ್ಟು ಕಡಿಮೆಯಾಗಿದೆ. ಅದಕ್ಕಾಗಿಯೇ ಫಾರೆಸ್ಟ್ ಇರಾಖೆಯವರು ಈ ಬಗ್ಗೆ ಧೃಡವಾದ ನಿಲವನ್ನು ತಳೆದಿದ್ದಾರೆ, ಅದಕ್ಕೆ ತಮ್ಮೆಲ್ಲರ ಸಹಕಾರವು ಬೇಕು ಎಂದು ಕೋರುತ್ತೇನೆ.

ಶ್ರೀ ಎಸ್. ಕರಿಯಪ್ಪ.—ನಾನು ಈ ಬಗ್ಗೆ ಪರಭಾರೆ ತೆಗೆಯಬೇಕು ಎನ್ನುವ ವಿಷಯ ಕೇಳಲಿಲ್ಲ. ಇದರಲ್ಲಿ ಕೆಲವು ಅಡ್ಡಿ ಆಂತಕಗಳು ಇವೆ. ಅವರು ಧನ ಸಹಾಯ ಪಡೆದುಕೊಳ್ಳುವುದಕ್ಕೆ ಅಂದರೆ ಲೋನ್ ಇತ್ಯಾದಿಗಳು ದೊರೆಯುವಂತೆ ಆಗಬೇಕಾದರೆ ಇದನ್ನು ರೆವಿನ್ಯೂ ಇರಾಖೆಗೆ ವಹಿಸಿಕೊಡುವುದು ನ್ಯಾಯವಲ್ಲವೆ ?

ಶ್ರೀ ಕೆ. ಎಚ್. ಪಾಟೀಲ್.—ಮೊದಲು ಫಾರೆಸ್ಟ್ ಇರಾಖೆಯಲ್ಲಿದ್ದುದನ್ನು ರೆವಿನ್ಯೂ ಇರಾಖೆಗೆ ಕೊಟ್ಟಿದ್ದಾರೆ. ಆ ರೆವಿನ್ಯೂ ಇರಾಖೆಯವರು ಅವರಿಗೆ ಕೊಟ್ಟಿದ್ದಾರೆ. ಆದುದರಿಂದ ಇದರಲ್ಲಿ ಪರಭಾರೆ ಎನ್ನುವ ವಿಷಯವೇ ಬರುವುದಿಲ್ಲವಾದ್ದರಿಂದ ಮಾನ್ಯ ಸದಸ್ಯರು ಹೇಳಿದ್ದು ನನಗೆ ಅರ್ಥವಾಗುವುದಿಲ್ಲ.